ನಿಯಮ-330
ಕ್ರ- 57 - ರಂಗ್ಯೋಟರ್



ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಗೋವಿಂದರಾಜು, ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಟಿ.ಎ.ಶರವಣ ಹಾಗೂ ಶ್ರೀ ಎಸ್.ಎಲ್.ಭೋಜೇಗೌಡ ಇವರುಗಳು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ:

ಪ್ರಶ್ನೆ:

ಕೋಲಾರ ಜಿಲ್ಲೆಯ ರೈತರು ತಮ್ಮ ಜೀವನೋಪಾಯಕ್ಕಾಗಿ ಕೃಷಿ, ತೋಟಗಾರಿಕೆ, ರೇಷ್ಮೆ ಹೈನುಗಾರಿಕೆ ಹಾಗೂ ಕೋಳಿಸಾಕಾಣಿಕೆಯಲ್ಲಿ ತೊಡಗಿರುತ್ತಾರೆ. ಕೃಷಿ ಸಂಬಂಧಿಸಿದಂತೆ ದೊಡ್ಡ ಪ್ರಮಾಣದಲ್ಲಿ ಕೃಷಿ ಬೆಳೆಗಳಾದ ರಾಗಿ, ನೆಲಗಡಲೆ ಹಾಗೂ ಉಪ ಬೆಳೆಗಳಾದ ತೊಗರಿ ಹಾಗೂ ಅವರೆಕಾಳು ಮಾತ್ರ ಬೆಳೆಯುತ್ತಿದ್ದು, ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು ಹಾಗೂ ಹೂಗಳನ್ನು ಹೆಚ್ಚಿನ ಜಮೀನಿನಲ್ಲಿ ರೈತರು ಬೆಳೆಯುತ್ತಿದ್ದಾರೆ. ಆದರೆ ಅನುದಾನ ಹಂಚಿಕೆಯಲ್ಲಿ ಸರ್ಕಾರ ತೋಟಗಾರಿಕೆ ಇಲಾಖೆಗೆ ಬಹಳ ಕಡಿಮೆ ಅನುದಾನ ಒದಗಿಸುತ್ತಿದ್ದಾರೆ. ಬಹಳ ಮುಖ್ಯವಾಗಿ ರೈತರಿಗೆ ಬೇಕಾದಂತ ತಾಂತ್ರಿಕತೆ, ಬೆಳೆಗೆ ತಗುಲುವ ರೋಗಗಳ ಪತ್ತೆಗೆ ಸರ್ಕಾರದಿಂದ ಸರಿಯಾದ ಮಾರ್ಗದರ್ಶನ, ಯಾವ ಯಾವ ಸಂದರ್ಭದಲ್ಲಿ ಯಾವ ಬೆಳೆಯನ್ನು ಬೆಳೆಯಬೇಕೆಂಬ ಅರಿವು ಮೂಡಿಸುವುದು ಹಾಗೂ ಉತ್ತಮ ತಾಂತ್ರಿಕತೆ, ಮಣ್ಣಿನ ಗುಣಮಟ್ಟದ ಸಂಶೋಧನೆ ಆಗಬೇಕಾಗಿರುವುದು, ರೈತರ ಹಿತದೃಷ್ಟಿಯಿಂದ ಈ ವಿಷಯವನ್ನು ಚರ್ಚಿಸುವ ಕುರಿತು.

ಉತ್ತರ:

ಕೋಲಾರ ಜಿಲ್ಲೆಯ ಭೌಗೋಳಿಕ ಕ್ಷೇತ್ರ 3.74 ಲಕ್ಷ ಹೆಕ್ಟೇರ್ ಪ್ರದೇಶ ಹೊಂದಿದ್ದು, ಇದರಲ್ಲಿ 2.39 ಲಕ್ಷ ಹೆಕ್ಟೇರ್ ಪ್ರದೇಶವು ಸಾಗುವಳಿಗಾಗಿ ಬಳಕೆಯಾಗುತ್ತಿದೆ. ಪ್ರಸ್ತುತ ಅಂದಾಜು 1.007 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತದೆ.

1. ಕೋಲಾರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆ, ರಾಜ್ಯ ವಲಯ ಯೋಜನೆ ಹಾಗೂ ಜಿಲ್ಲಾವಲಯ ಯೋಜನೆಗಳ ಅನುದಾನ ಬಿಡುಗಡೆ ಹಾಗೂ ವೆಚ್ಚದ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| 2019-20 | | 2020-21 | | 2021-22 | | ಒಟ್ಟು | |
|---|---|---|---|---|---|---|---|
| ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ |
| 3679.69 | 3657.53 | 3207.92 | 2909.79 | 2623.33 | 2022.91 | 9510.95 | 8590.24 |

**ಯೋಜನಾವಾರು ಬಿಡುಗಡೆಯಾದ, ವೆಚ್ಚದ ವಿವರವನ್ನು ಅನುಬಂಧ-01ರಲ್ಲಿ ಒದಗಿಸಿದೆ.**

ವರ್ಷದಿಂದ ವರ್ಷಕ್ಕೆ ತೋಟಗಾರಿಕೆ ಪ್ರದೇಶದ ವಿಸ್ತರಣೆ ಹೆಚ್ಚಾಗುತ್ತಿರುವುದು ಗಮನಿಸಬಹುದಾಗಿದೆ. ಆದರೆ ಅನುದಾನ ಹಂಚಿಕೆಯು ಕಡಿಮೆಯಾಗಿರುತ್ತದೆ.

2. ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವ ಟೊಮ್ಯೊಟೊ, ಮಾವು, ಕ್ಯಾಪ್ಸಿಕಂ, ಆಲೂಗಡ್ಡೆ ಬೆಳೆಗಳಲ್ಲಿ ತಗಲುವ ಕೀಟ ಹಾಗೂ ರೋಗ ಭಾದೆಗಳಿಗೆ ಜಿಲ್ಲೆಯಲ್ಲಿ ಇರುವ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಸಹಯೋಗದೊಂದಿಗೆ ತಾಕುಗಳಿಗೆ ಭೇಟಿ ನೀಡಿ ರೈತರಿಗೆ ತಾಂತ್ರಿಕ ಸಲಹೆಗಳು ನೀಡಲಾಗುತ್ತಿದೆ ಹಾಗೂ ಕ್ಷೇತ್ರ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಕ್ಷೇತ್ರಗಳಿಗೆ ಭೇಟಿ ನೀಡಿ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡುವುದರ ಜೊತೆಗೆ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
3. ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕೆ ಮಹಾವಿದ್ಯಾಲಯ, ಟಮಕ ಕೋಲಾರದ ಮಣ್ಣು ಮತ್ತು ನೀರು ಪರೀಕ್ಷೆ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯ, ಚಿಂತಾಮಣಿಯ ಮಣ್ಣು ಪರೀಕ್ಷೆ ಕೇಂದ್ರ ಹಾಗೂ ತೋಟಗಾರಿಕೆ ಇಲಾಖೆ ಜೈವಿಕ ಕೇಂದ್ರಗಳಲ್ಲಿ ಮಣ್ಣು ಮಾದರಿಗಳನ್ನು ಪರೀಕ್ಷಿಸಲು ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.

4. ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆಯ ಅಂಗ ಸಂಸ್ಥೆಗಳಾದ ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ, ತೋಟಗಾರಿಕೆ ಸಂಶೋಧನಾ ಕೇಂದ್ರ ಹೊಗಳಗೆರೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ಕೋಲಾರ ಮತ್ತು ತೋಟಗಾರಿಕೆ ಇಲಾಖೆಯ ಸಯೋಗದೊಂದಿಗೆ ಕಳೆದ 4 ವರ್ಷದಲ್ಲಿ 4290 ಜನ ರೈತರಿಗೆ ವಿವಿಧ ತಾಂತ್ರಿಕ ವಿಷಯಕ್ಕೆ ತರಬೇತಿ ಹಮ್ಮಿಕೊಳ್ಳಲಾಗಿದೆ.
5. ರೈತರ ಸುಸ್ಥಿರ ಆದಾಯಕ್ಕಾಗಿ ಒಂದು ಎಕರೆ ಜಮೀನಿನಲ್ಲಿ ಕೃಷಿ ಬೆಳೆಯಲ್ಲಿ ಮಿಶ್ರ ಬೆಳೆಯಾಗಿ 20 ಮಾವು, 1 ಹುಣಸೆ ಹಾಗೂ 1 ಹಲಸು ಬೆಳೆಯುವ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ.
6. ತೋಟಗಾರಿಕೆ ಬೆಳೆಯಲ್ಲಿ ನೂತನ ತಳಿಗಳ ಪರಿಚಯಪಡಿಸುವಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ.
7. ಪ್ರಮುಖವಾಗಿ **ಟೊಮೆಟೊ**: ಕೃಷ್ಣ ಪ್ರಭ, ಶಾಲ್ಮಲಾ, ಕೃಷ್ಣಪ್ರಭ ತುಂಗ ಹಾಗೂ ಕೃಷ್ಣ ಪ್ರಭಬಾರಿ ಎಂಬ ಮೂರು ತಳಿಗಳು. **ಮಾವು:**ಮಲ್ಲಿಕ, ಬಾದಾಮಿ, ಬೆಂಗಳೂರಾ ತಳಿಗಳನ್ನು ಪರಿಚಯಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ. **ಗೊಡಂಬಿ:**ಚಿಂತಾಮಣಿ -1, 2 ಮತ್ತು 3 ತಳಿಯ ಪರಿಚಯ ಮತ್ತು ಸದರಿ ಬೆಳೆಯ ತಾಂತ್ರಿಕ ತರಬೇತಿಯನ್ನು ಕೈಗೊಳ್ಳಲಾಗುತ್ತಿದೆ.
8. ಒಂದು ಜಿಲ್ಲೆ ಒಂದು ಉತ್ಪನ್ನ ಕಾರ್ಯಕ್ರಮದಡಿ ಕೋಲಾರ ಜಿಲ್ಲೆಯ ಪ್ರಮುಖ ತರಕಾರಿ ಬೆಳೆಯಾದ ಟೊಮೆಟೊ ಬೆಳೆಗೆ ಸೂಕ್ತ ಸಂಸ್ಕರಣೆಗಾಗಿ **ರೂ.**3.50 ಕೋಟಿ ವೆಚ್ಚದಲ್ಲಿ ಸಂಸ್ಕರಣಾ ಕೇಂದ್ರವನ್ನು ಸ್ಥಾಪನೆ ಮಾಡಲಾಗುತ್ತಿದೆ.
9. ತೋಟಗಾರಿಕೆ ಉತ್ಪನ್ನಗಳ ಸಂರಕ್ಷಣೆಗಾಗಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ RIDF ಯೋಜನೆಯಡಿ 2000 ಮೆ.ಟನ್ ಸಾಮರ್ಥದ ಶೀಥಲಗೃಹ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ.
10. ಇಲಾಖಾ ಯೋಜನೆಗಳಲ್ಲಿ ರೈತರಿಗೆ ತರಬೇತಿ, ಕ್ಷೇತ್ರೋತ್ಸವ ಮತ್ತು ವಿಚಾರ ಸಂಕೀರ್ಣಗಳನ್ನು ಆಯೋಜಿಸಿ ಉತ್ಪಾದನೆ ಮತ್ತು ಗುಣಮಟ್ಟದ ಉತ್ಪನ್ನವನ್ನು ಹೆಚ್ಚಿಸಲು ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.
11. ತೋಟಗಾರಿಕೆ ಇಲಾಖೆ ಅಂಗ ಸಂಸ್ಥೆಯಾದ ಮಾವು ಅಭಿವೃದ್ಧಿ ಮಂಡಳಿ ಹೊಗಳಗೆರೆ ಶ್ರೀನಿವಾಸಪುರ ಹಾಗೂ ಮಾವು ಉತ್ಕೃಷ್ಟ ಕೇಂದ್ರ ಹೊಗಳಗೆರೆ ಶ್ರೀನಿವಾಸಪುರ ರವರಿಂದ ಮಾವು ಬೆಳೆಯ ಬಗ್ಗೆ ಕಾಲ ಕಾಲಕ್ಕೆ ಬರುವ ರೋಗ ಮತ್ತು ಕೀಟಭಾಧೆಗಳ ನಿಯಂತ್ರಣಕ್ಕೆ ಕರಪತ್ರಗಳು, Poster ಹಾಗೂ ತರಬೇತಿಗಳ ಮೂಲಕ ರೈತರಿಗೆ ತಾಂತ್ರಿಕ ಮಾಹಿತಿಯನ್ನು ನೀಡಲಾಗುತ್ತಿರುತ್ತದೆ.
12. ರೋಗ / ಕೀಟಗಳ ಬಾಧೆಯಿಂದ ಹಾನಿಗೊಳಗಾದ ರೈತರಿಗೆ ಇಲಾಖಾವತಿಯಿಂದ ಜಿಲ್ಲಾವಲಯ "ರೈತರಿಗೆ ಸಹಾಯ" ಯೋಜನೆಯಲ್ಲಿ ಸಸ್ಯಸಂರಕ್ಷಣಾ ಔಷಧಿ ಖರೀದಿಗೆ ಶೇ. 50% ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. ರಾಜ್ಯವಲಯ "ತೋಟಗಾರಿಕೆ ಬೆಳೆಗಳ ಕೀಟ & ರೋಗಗಳ ಸಮಗ್ರ ನಿಯಂತ್ರಣ" ಯೋಜನೆಯಲ್ಲಿ ಸಸ್ಯಸಂರಕ್ಷಣಾ ಔಷದಿ ಖರೀದಿಗೆ ಶೇ.75% ರಷ್ಟು ಸಾಮಾನ್ಯ ವರ್ಗದವರಿಗೆ ಹಾಗೂ ಶೇ.90%ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.
13. ತೆಂಗಿನ ಬೆಳೆಯಲ್ಲಿ ಕಂಡು ಬರುವ ಕಪ್ಪು ತಲೆಹುಳುವಿನ ನಿಯಂತ್ರಣಕ್ಕಾಗಿ ಇಲಾಖಾ ಪ್ರಯೋಗ ಶಾಲೆಗಳಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.
14. ತೋಟಗಾರಿಕೆ ಬೆಳೆಗಳ ಮಾರುಕಟ್ಟೆಗಾಗಿ ಇಲಾಖೆಯ ಕಾರ್ಯಕ್ರಮಗಳಡಿ ರೈತ / ರೈತ ಉತ್ಪಾದಕ ಸಂಸ್ಥೆಗಳಿಗೆ ಮಾರುಕಟ್ಟೆ ಸ್ಥಾಪನೆಗೆ ಸರ್ಕಾರದಿಂದ ಸಹಾಯ ಕಲ್ಪಿಸಲಾಗುತ್ತಿದೆ.
15. ಇಲಾಖೆಯ ವಿಸ್ತರಣಾ ಚಟುವಟಿಕೆಗಳ ಮೂಲಕ ರೈತರಿಗೆ ಅಗತ್ಯ ತಾಂತ್ರಿಕ ನೆರವು, ಬೆಳೆ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿಮ ಮಣ್ಣಿನ ಗುಣಮಟ್ಟ ಪರಿಶೀಲನೆಗೆ ಸೂಕ್ತ ಮಾಹಿತಿ ನೀಡಿ ಮಾರ್ಗದರ್ಶನ ನೀಡಲಾಗುತ್ತಿದೆ..

**HORTI 472 HGM 2022**

(ಮುನಿರತ್ನ)
**ತೋಟಗಾರಿಕೆ ಹಾಗೂ ಯೋಜನೆ,**
**ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**

Kule-550

## ಅನುಬಂಧ-1

## ಕಳೆದ 3 ವರ್ಷಗಳಲ್ಲಿ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಕೋಲಾರ ಜಿಲ್ಲೆಗೆ ಒದಗಿಸಲಾದ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಯ ಹೆಸರು | 2019-20 | | 2020-21 | | 2021-22 | | ಒಟ್ಟು | |
|---|---|---|---|---|---|---|---|---|---|
| | | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ |
| I | ಕೇಂದ್ರ ನೆರವಿನ ಯೋಜನೆಗಳು | | | | | | | | |
| 1 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ (2401-00-108-2-18) | 0 | 0 | 0 | 0 | 0 | 0 | 0.00 | 0.00 |
| 2 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) (2401-00-108-2-30) | 1915.68 | 1911.32 | 1932.80 | 1836.79 | 1452.09 | 899.75 | 5300.57 | 4647.86 |
| 3 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ. (2401-00-108-2-51) | 10.71 | 10.48 | 0.00 | 0.00 | 0.00 | 0.00 | 10.71 | 10.48 |
| 4 | ರಾಷ್ಟ್ರೀಯ ತೋಟಗಾರಿಕೆ ಮಿಷನ್ (2401-00-119-4-06) | 593.75 | 589.16 | 600.42 | 456.88 | 169.96 | 161.36 | 1364.13 | 1207.40 |
| 5 | ರಾಷ್ಟ್ರೀಯ ಆಯುಷ್ ಮಿಷನ್ 2401-00-119-4-11 | 3.34 | 3.34 | 11.13 | 11.52 | 0.00 | 0.00 | 14.47 | 14.86 |
| 6 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401-00-800-1-56 | 66.26 | 65.88 | 56.20 | 50.11 | 159.22 | 133.69 | 281.68 | 249.68 |
| | ಉಪ ಮೊತ್ತ | 2589.74 | 2580.18 | 2600.55 | 2355.30 | 1781.27 | 1194.80 | 6971.56 | 6130.28 |
| II | ರಾಜ್ಯವಲಯ ಯೋಜನೆಗಳು | | | | | | | | |
| 1 | ನಿರ್ದೇಶನ ಮತ್ತು ಆಡಳಿತ 2401-00-001-2-01 | 50.66 | 47.81 | 19.53 | 19.28 | 40.23 | 32.80 | 110.42 | 99.89 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ 2401-00-001-2-10 | 0.00 | | 5.00 | 5.00 | 2.00 | 2.00 | 7.00 | 7.00 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ (2401-00-111-0-08) | 287.11 | 282.45 | 458.53 | 431.70 | 731.30 | 727.18 | 1476.94 | 1441.33 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯಪಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ (2401-00-110 4 05) | 22.98 | 22.98 | 15.00 | 5.82 | 20.00 | 20.00 | 57.98 | 48.80 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ (2401-00-119-5-01) | 0.60 | 0.60 | 0.60 | 0.36 | 0.30 | 0.30 | 1.50 | 1.26 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ (2401-00-119-5-02) | 71.65 | 70.58 | 25.99 | 25.51 | 20.50 | 20.50 | 118.14 | 116.59 |
| 7 | ತೋಟಗಾರಿಕೆ ಕಟ್ಟಡಗಳು (2401-00-119-6-03) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 8 | ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ (2401-00-800-2-80) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 9 | ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು (2406-02-112-0-17) | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 10 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ (2851-00-200-0-01) | 19.90 | 19.86 | 15.25 | 8.95 | 5.00 | 4.80 | 40.15 | 33.61 |
| 11 | RIDF-XXI. A) Micro Irrigation (4401-00-800-1-08) | 0 | 0 | 0 | 0 | 0 | 0 | 0.00 | 0.00 |
| 12 | ಕೃಷಿ ಭಾಗ್ಯ (ತೋಟಗಾರಿಕೆ) (2401-00-800-2-48) | 553.89 | 550.99 | 0 | 0 | 0 | 0 | 553.89 | 550.99 |
| | ಉಪ ಮೊತ್ತ | 1006.79 | 995.27 | 539.90 | 498.62 | 819.33 | 807.58 | 2366.02 | 2299.47 |
| III | ಜಿಲ್ಲಾವಲಯ ಯೋಜನೆಗಳು | | | | | | | | |
| 1 | ತೋಟಗಾರಿಕೆ ಬೆಳೆಗಳಿಗೆ ವಿಶೇಷ ಘನ ನೀರಾವರಿ (2435-00-101-0-28) | 40.00 | 39.21 | 40.00 | 36.05 | | | 80.00 | 75.26 |
| 2 | ತೋಟಗಾರಿಕೆ ಕಟ್ಟಡಗಳು (2435-00-101-0-32) | 24.00 | 24.00 | 10.28 | 10.28 | 10.28 | 10.28 | 44.56 | 44.56 |
| 3 | ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (2435-00-101-0-35) | 2.00 | 1.75 | 2.00 | 1.67 | 2.00 | 1.80 | 6.00 | 5.22 |
| 4 | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ (2435-00-101-0-36) | 2.00 | 2.00 | 2.00 | 1.94 | 0.00 | 0.00 | 4.00 | 3.94 |
| 5 | ಪ್ರಚಾರ ಮತ್ತು ಸಾಹಿತ್ಯ (2435-00-101-0-38) | 8.00 | 7.99 | 8.00 | 2.89 | 8.00 | 6.00 | 24.00 | 16.88 |
| 6 | ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ (2435-00-101-0-39 ) | 2.00 | 2.00 | 2.00 | 2.00 | 0.00 | 0.00 | 4.00 | 4.00 |
| 7 | ಜೇನು ಸಾಕಾಣಿಕೆ (2851-00-107-0-33) | 2.45 | 2.45 | 2.45 | 2.45 | 2.45 | 2.45 | 7.35 | 7.35 |
| 8 | ರೈತರಿಗೆ ಸಹಾಯ (2435-00-101-0-62) | 2.09 | 2.07 | 0.00 | 0.00 | 0.00 | 0.00 | 2.09 | 2.07 |
| 9 | ರೈತರಿಗೆ ತರಬೇತಿ (2435-00-101-0-64) | 0.62 | 0.62 | 0.75 | 0.60 | 0.00 | 0.00 | 1.37 | 1.22 |
| | ಉಪ ಮೊತ್ತ | 83.16 | 82.09 | 67.48 | 57.88 | 22.73 | 20.53 | 173.37 | 160.50 |
| | ಒಟ್ಟು | 3679.69 | 3657.54 | 3207.93 | 2909.80 | 2623.33 | 2022.91 | 9510.95 | 8590.25 |

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್ ಬಾಗ್, ಬೆಂಗಳೂರು-4